International Journal of Kannada Research
www.kannadajournal.com

ISSN: 2454–5813
IJKR 2021; 7(3): 117-120
© 2021 IJKR
www.kannadajournal.com
Received: 25-05-2021
Accepted: 27-06-2021

**ಶ್ರೀಕಾಂತ್ ಎಂ ಕುಸೂರ**
ಸಂಶೋಧನಾ ವಿದ್ಯಾರ್ಥಿ
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣ, ಬೆಂಗಳೂರು

**ಮಾರ್ಗದರ್ಶಕರು**
ಡಾ.ಬಿ ಶೈಲಶ್ರೀ, ಎಂ.ಎಸ್, ಎಂ ಫಿಲ್, ಪಿಎಚ್‌ಡಿ ಸಹ ಪ್ರಾಧ್ಯಾಪಕರು ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಬೆಂಗಳೂರು ವಿಶ್ವವಿದ್ಯಾನಿಲಯ ಜ್ಞಾನಭಾರತಿ ಆವರಣ, ಬೆಂಗಳೂರು

**Corresponding Author:**
**ಶ್ರೀಕಾಂತ್ ಎಂ ಕುಸೂರ**
ಸಂಶೋಧನಾ ವಿದ್ಯಾರ್ಥಿ
ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಜ್ಞಾನಭಾರತಿ ಆವರಣ, ಬೆಂಗಳೂರು

# ಅಭಿವೃದ್ಧಿ ಸಂವಹನ ಮಾಧ್ಯಮವಾಗಿ ಸಮುದಾಯ ರೇಡಿಯೋ: ಸಮುದಾಯ ರೇಡಿಯೋ ಕಾರ್ಯಕ್ರಮಗಳ ಗುಣಲಕ್ಷಣಗಳು

**ಶ್ರೀಕಾಂತ್ ಎಂ ಕುಸೂರ, ಮಾರ್ಗದರ್ಶಕರು**

**ಸಾರಾಂಶ**

ಮಾಧ್ಯಮ ಲೋಕದಲ್ಲಿ ಬಾನುಲಿ (ರೇಡಿಯೋ)ಗೆ ವಿಶಿಷ್ಟ ಸ್ಥಾನವಿದೆ. ಶ್ರವಣ ಮಾಧ್ಯಮವಾದ ರೇಡಿಯೋ ತನ್ನ ಸರಳತನದಿಂದ ಕೇವಲ ಶಬ್ಧದಿಂದಲೇ ಇಲ್ಲಿಯವರೆಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಕಡಿಮೆ ಬೆಲೆ ಮತ್ತು ಅನಕ್ಷರಸ್ತರನ್ನು ಕೂಡ ಸುಲಭವಾಗಿ ತಲುಪುವದರಿಂದಲೇ ರೇಡಿಯೋ ಜನಪ್ರಿಯತೆ ಹೆಚ್ಚಲು ಪ್ರಮುಖ ಕಾರಣ.

ಮುದ್ರಣ ಮಾಧ್ಯಮಗಳಾದ ಪತ್ರಿಕೆ ಮತ್ತು ನಿಯತಕಾಲಿಕಗಳು ಕೇವಲ ಅಕ್ಷರ ಕಲಿತವರಿಗೆ ಮಾತ್ರ ಸೀಮಿತವಾಗಿದ್ದವು. ರೇಡಿಯೋದ ಆವಿಷ್ಕಾರದಿಂದಾಗಿ ಅನಕ್ಷರಸ್ಥರು ಕೂಡ ಮಾಧ್ಯಮಗಳಿಗೆ ತೆರೆದುಕೊಳ್ಳುವಂತಾಯಿತು. ಆರಂಭದಲ್ಲಿ ಸಂದೇಶ ಕಳುಹಿಸಲು ಮತ್ತು ಸುದ್ದಿಗಳುನ್ನು ಮುಟ್ಟಿಸಲು ಬಳಕೆಯಾಗುತ್ತಿದ್ದ ರೇಡಿಯೋ ನಂತರದ ದಿನಗಳಲ್ಲಿ ಸಮಾಜದ ಅಭಿವೃದ್ಧಿಯ ಕಡೆ ಮುಖ ಮಾಡಿದ್ದನ್ನು ಇತಿಹಾಸದ ಪುಟಗಳಲ್ಲಿ ಕಾಣಬಹುದು.

ಮಾಹಿತಿ ಮತ್ತು ಮನೋರಂಜನೆ ಹೊರತಾಗಿ, ಶಿಕ್ಷಣ ಮತ್ತು ಅಭಿವೃದ್ಧಿಗೆ ಹೆಚ್ಚಿನ ಮಹತ್ವ ಸಿಕ್ಕಿದ್ದು ಸಮುದಾಯ ಬಾನುಲಿಗಳ ಬೆಳವಣಿಗೆಯಿಂದ. ಸಮುದಾಯ ಬಾನುಲಿಗಳ ಬೆಳವಣಿಗೆಯನ್ನು ಬಾನುಲಿ ಕ್ಷೇತ್ರದ ಮೂರನೇ ಆವೃತ್ತಿಯಂದು ಪರಿಗಣಿಸಲಾಗಿದೆ. ಯಾವುದೇ ಲಾಭದ ಉದ್ದೇಶವಿಲ್ಲದೆ ಮಾಧ್ಯಮವನ್ನು ಉದ್ಯಮವಾಗಿ ಪರಿಗಣಿಸದೆ ಕೇವಲ ಸಮಾಜದ ಹಿತಕ್ಕಾಗಿ ಜನರಿಂದ ಜನರಿಗಾಗಿ ಜನರಿಗೋಸ್ಕರ ಕಾರ್ಯಕ್ರಮಗಳನ್ನು ನಡೆಸುವುದು ಸಮುದಾಯ ಬಾನುಲಿಗಳ ಪ್ರಮುಖ ಉದ್ದೇಶ.

ಯಾವುದೇ ಮಾಧ್ಯಮವಾದರೂ ಅದರ ಸಂದೇಶ ಮತ್ತು ಅದರ ಪರಿಣಾಮ ಬಹು ಮುಖ್ಯವಾಗುತ್ತದೆ. ಮಾಧ್ಯಮದ ಮೂಲಕ ಜನರನ್ನು ತಲುಪುವ ಸಂದೇಶ ಇಡೀ ಸಮಾಜದ ಮೇಲೆ ಪರಿಣಾಮ ಬೀರುತ್ತದೆ. ಈ ನಿಟ್ಟಿನಲ್ಲಿ ನಾವು ಮಾಧ್ಯಮದ ಸಂದೇಶದ ಬಗ್ಗೆ ಹೆಚ್ಚು ಗಮನ ಹರಿಸಬೇಕು. ಗ್ರಾಮೀಣ ಅಭಿವೃದ್ಧಿಯ ದೃಷ್ಟಿಕೋನದಲ್ಲಿ ನೋಡುವುದಾದರೆ ಒಂದು ಸಮಾಜ ಅಥವಾ ಸಮುದಾಯದ ಅಭಿವೃದ್ಧಿಗೆ ಸಾಮಾನ್ಯ ರೇಡಿಯೋ ಕಾರ್ಯಕ್ರಮಗಳಂತೆ ಕಾರ್ಯಕ್ರಮಗಳನ್ನು ರೂಪಿಸಿದರೆ ಸಮುದಾಯದಲ್ಲಿ ಅಭಿವೃದ್ಧಿಯ ಬದಲಾವಣೆ ತರುವುದು ಕಷ್ಟಕರವಾದ ಕೆಲಸ. ಸಮುದಾಯದ ಹಿತದೃಷ್ಟಿಯಿಂದ ಸಮುದಾಯದ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ಘೋಷಿಸಿರುವ ಸಮುದಾಯ ರೇಡಿಯೋ ಕಾರ್ಯನೀತಿಯ ಪ್ರಕಾರ ಸಮುದಾಯ ರೇಡಿಯೋ ಕೆಲವು ಮಾನದಂಡವನ್ನು ಅನುಸರಿಸಬೇಕಾಗುತ್ತದೆ.

**ಕೀವರ್ಡ್‌ಗಳು:** ಅಭಿವೃದ್ಧಿ ಸಂವಹನ, ಮಾಧ್ಯಮವಾಗಿ ಸಮುದಾಯ ರೇಡಿಯೋ, ಸಮುದಾಯ ರೇಡಿಯೋ

## ಪೀಠಿಕೆ

ಹಳ್ಳಿಗಳು ದೇಶದ ಬೆನ್ನೆಲುಬು ಎನ್ನುವುದನ್ನ ರಾಷ್ಟ್ರಪಿತ ಮಹಾತ್ಮ ಗಾಂಧಿಯವರೇ ಹೇಳಿದ್ದಾರೆ. ಹಳ್ಳಿಗಳ ಅಭಿವೃದ್ಧಿಯೇ ಭಾರತದ ಅಭಿವೃದ್ಧಿ. ಗ್ರಾಮಗಳ ಅಭಿವೃದ್ಧಿಗಾಗಿ ಸರ್ಕಾರಗಳು ಅನೇಕ ಯೋಜನಗೆಳನ್ನು ರೂಪಿಸುತ್ತ ಬಂದಿದೆ. ಸರ್ಕಾರದ ಯೋಜನೆಗಳನ್ನು ಜನ ಸಾಮಾನ್ಯರಿಗೆ ತಲುಪಿಸುವಲ್ಲಿ ಮಾಧ್ಯಮಗಳು ಸೇತುವೆಯಂತೆ ಕಾರ್ಯನಿರ್ವಹಿಸುತ್ತಿವೆ. ಈ ನಿಟ್ಟಿನಲ್ಲಿ ಸಮುದಾಯ ಬಾನುಲಿಗಳು ಪ್ರಮುಖ ಪಾತ್ರ ವಹಿಸಿರುವುದನ್ನು ನಾವು ಗಮನಿಸಬಹುದು. ಭಾರತದಲ್ಲಿ ಇಂದು ಶೇ 99 ರಷ್ಟು ಮಂದಿ ಬಾನುಲಿಗಳನ್ನು ಬಳಸುತ್ತಿದ್ದಾರೆ. ಹೆಚ್ಚು ಜನರು ತಮ್ಮ ಕೆಲಸದ ನಡುವೆಯು

ಬಾನುಲಿಯು ಕೇಳುತ್ತಿದ್ದಾರೆ. ಬಾನುಲಿಯಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳು ಜನರನ್ನು ಯಶಸ್ವಿಯಾಗಿ ತಲುಪುತ್ತಿವೆ.

**ರೇಡಿಯೋ ಗುಣಲಕ್ಷಣಗಳು**

- **ಶ್ರವಣ ಮಾಧ್ಯಮ/ಕುರುಡು ಮಾಧ್ಯಮ:** ರೇಡಿಯೋವನ್ನು 'ಕುರುಡು ಮಾಧ್ಯಮ' ಎಂದು ಕರೆಯಲಾಗುತ್ತದೆ. ಕಾರಣ ಇಲ್ಲಿ ಕೇವಲ ಧ್ವನಿ ಮತ್ತು ಶಬ್ದಕ್ಕಷ್ಟೆ ಅವಕಾಶವಿರುವುದು, ದೃಶ್ಯಕ್ಕೆ ಅವಕಾಶವಿರುವುದಿಲ್ಲ. ಅತ್ಯಂತ ಸರಳ ಮಾಧ್ಯಮಗಿರುವ ರೇಡಿಯೋ ಸೃಜನಶೀಲತೆ ಮಾಧ್ಯಮ, ಅಕ್ಷರಸ್ತರ, ಅನಕ್ಷರಸ್ತರು, ಅಂಧರು ಕೂಡ ಯಾವುದೇ ವಯಸ್ಸಿನ ಅಂತರವಿಲ್ಲದೇ ರೇಡಿಯೋವನ್ನು ಕೇಳಬಹುದು ಆದುದರಿಂದಲೆ ತಂತ್ರಜ್ಞಾನ ಮತ್ತು ಮಾಧ್ಯಮ ಲೋಕ ಎಷ್ಟೇ ಬೆಳೆದರೂ ರೇಡಿಯೋ ಇನ್ನು ಜೀವಂತವಾಗಿರುವುದು. ಸಮಯದ ಸದುಪಯೋಗದ ಜೊತೆಗೆ ಕೇಳುಗರನ್ನು ಕ್ರಿಯಾಶೀಲರನ್ನಾಗಿಸಬಲ್ಲ ಶಕ್ತಿ ರೇಡಿಯೋಗಿದೆ. ಇಲ್ಲಿ ಕೇಳುಗರೇ ಕೇಂದ್ರವಾಗಿರುವುದರಿಂದ ಅವರ ಕಲ್ಪನೆಗೆ ಮಿತಿಯಿಲ್ಲ. ಸಿನಿಮ ಅಥವಾ ಇತರೆ ದೃಶ್ಯ ಮಾಧ್ಯಮದಲ್ಲಿ ಪ್ರೇಕ್ಷಕನಿಗೆ ಕಲ್ಪನೆಯ ಅವಕಾಶಗಳು ಇರುವುದಿಲ್ಲ, ಇನ್ನ್ಯಾರದ್ದೋ ಕಲ್ಪನೆಗೆ ನಾವು ಪ್ರೇಕ್ಷಕರಾಗಿರುತ್ತೇವೆ. ಆದರೆ ರೇಡಿಯೋ ಕೇಳುವಾಗ ಕೇವಲ ಧ್ವನಿ ಮತ್ತು ಶಬ್ದಗಳನ್ನು ಆಲಿಸಿ ಶ್ರೋತೃಗಳು ತಮ್ಮ ಕಲ್ಪನಾಶಕ್ತಿಯಿಂದಲೇ ವಿಚಾರವನ್ನು ಅರಿಯುತ್ತಾರೆ. ತಮ್ಮದೇ ಆದ ಲೋಕ ಸೃಷ್ಟಿಸಿಕೊಳ್ಳುವುದರ ಜೊತೆಗೆ ವಿಚಾರ ಶಕ್ತಿಯನ್ನು ಬೆಳಸಿಕೊಳ್ಳಬಹುದು. ಹಾಗಾಗಿ ಇದು ಕುರುಡು ಮಾಧ್ಯಮದ ಜೊತೆಗೆ ಪ್ರಬಲ ಮಾಧ್ಯಮ ಎಂದು ಪರಿಗಣಿಸುತ್ತದೆ.
- **ಪ್ರಬಲ ಸಮೂಹ ಮಾಧ್ಯಮ:** ರೇಡಿಯೋ ಸಾಮಾನ್ಯ ಮಾಧ್ಯಮವಲ್ಲ. ತಂತ್ರಜ್ಞಾನ ಬೆಳೆದಂತೆ ಆಧುನಿಕತೆಗೆ ತಕ್ಕಂತೆ ಬದಲಾಗುತ್ತ ಹೊಸ ಹೊಸ ತಂತ್ರಜ್ಞಾನವನ್ನು ಅವಳವಡಿಸಿಕೊಳ್ಳುತ್ತ ಬಂದಿರು ಪ್ರಬಲ ಸಮೂಹ ಮಾಧ್ಯಮ. ಇತರೆ ಎಲೆಕ್ಟ್ರಾನಿಕ್ ಮಾಧ್ಯಮಗಳಾದ ಟಿವಿ, ಇಂಟರ್‌ನೆಟ್‌ಗಳ ನಡುವೆಯು ತನ್ನ ವರ್ಚಸನ್ನು ಉಳಿಸಿಕೊಂಡು ಶ್ರೋತೃಗಳನ್ನು ಹಿಡಿದಿಟ್ಟುಕೊಂಡಿರುವುದು ವಿಶೇಷ. ಡಿಜಿಟಲ್ ಯುಗದಲ್ಲಿಯೂ ರೇಡಿಯೋಗೆ ಬೇಡಿಕೆ ಇದೆ. ಖಾಸಗಿ ರೇಡಿಯೋ, ವೈಯಕ್ತಿಕ ರೇಡಿಯೋ, ಇಂಟರ್ನೆಟ್ ರೇಡಿಯೋ ಎಲ್ಲ ವರ್ಗದ ಜನರನ್ನು ಹಿಡಿದಿಟ್ಟುಕೊಂಡಿದೆ. ಭಾರತದಲ್ಲಿ ಅತಿ ಹೆಚ್ಚು ಬಳಸಲ್ಪಡುತ್ತಿರುವ ಮಾಧ್ಯಮ ಎನ್ನುವ ಹೆಗ್ಗಳಿಕೆ ರೇಡಿಯೋಗಿದೆ. ಭಾರತದ ಶೇ.92ರಷ್ಟು ಭೌಗೋಳಿಕ ಪ್ರದೇಶದ ಶೇ.99ರಷ್ಟು ಮಂದಿ ರೇಡಿಯೋ ಕೇಳುತ್ತಾರೆ. ಆದ್ದರಿಂದಲೇ ರೇಡಿಯೋ ಇಂದಿಗೂ ಒಂದು ಪ್ರಬಲ ಸಮೂಹ ಮಾಧ್ಯಮ ಎಂದೆನಿಸಿಕೊಂಡಿದೆ. (http://allindiaradio.gov.in/Profile/Factss%20at%20Glance/Pages/default.aspx retrieved on August 10, 2014)
- **ನೇರ ಮಾಧ್ಯಮ:** ರೇಡಿಯೋ ಆರಂಭದಲ್ಲಿ ಧ್ವನಿ ಮುದ್ರಿತ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತಿತ್ತು, ತಂತ್ರಜ್ಞಾನ ಬೆಳೆದಂತೆ ಧ್ವನಿ ಮುದ್ರಿತ ಕಾರ್ಯಕ್ರಮಗಳ ಜೊತೆಗೆ ನೇರ ಪ್ರಸಾರದ ಕಾರ್ಯಕ್ರಮಗಳ ಮೂಲಕ ಜನಪ್ರಿಯತೆಗಳಿಸಿ ಇಂದು ನೇರ ಪ್ರಸಾರದ ಕಾರ್ಯಕ್ರಮಗಳೇ ಹೆಚ್ಚಿನ ಸಂಖ್ಯೆಯಲ್ಲಿ ಪ್ರಸಾರವಾಗುತ್ತಿವೆ. ನೇರ ಫೋನ್ ಇನ್ ಕಾರ್ಯಕ್ರಮಗಳು, ಸಂದರ್ಶನಗಳು, ಖಾಸಗಿ ರೇಡಿಯೋಗಳ ನೇರ ಪ್ರಸಾರದ ಕಾರ್ಯಕ್ರಮಗಳು ಹೆಚ್ಚುತ್ತಿವೆ. ಕೇಳುಗರೇ ತಮ್ಮಿಷ್ಟದ ಕಾರ್ಯಕ್ರಮಗಳಲ್ಲಿ ಭಾಗಿಯಾಗುವ ಅವಕಾಶವನ್ನು ನೇರ ಕಾರ್ಯಕ್ರಮಗಳು ಕಲ್ಪಿಸಿವೆ.
- **ಅಗ್ಗ ಮತ್ತು ಉಚಿತ ಮಾಧ್ಯಮ:** ರೇಡಿಯೋ ಜನಪ್ರಿಯತೆಗೆ ಮುಖ್ಯ ಕಾರಣ ಅದರ ಬೆಲೆ. ಬೇರೆಲ್ಲ ಮಾಧ್ಯಮಗಳಿಗಿಂತ ಅಗ್ಗದ ಬೆಲೆಯಲ್ಲಿ ರೇಡಿಯೋ ಜನಸಾಮಾನ್ಯರಿಗೆ ದೊರೆಯುತ್ತದೆ ಮತ್ತು ರೇಡಿಯೋ ಬಳಸುವುದು ಕೂಡ ಅತ್ಯಂತ ಸರಳವಾಗಿದೆ. ಇಂದು ಮೊಬೈಲ್‌ಗಳಲ್ಲಿ ರೇಡಿಯೋ ಅಪ್ಲಿಕೇಶನ್‌ಗಳನ್ನು ಉಚಿತವಾಗಿಯೇ ನೀಡುತ್ತಾರೆ. ಪ್ರಪಂಚದ ಯಾವ ಮೂಲೆಯಲ್ಲಿದ್ದರು ಶ್ರೋತೃಗಳು ತಮ್ಮ ನೆಚ್ಚಿನ ರೇಡಿಯೋವನ್ನು ಆಲಿಸಬಹುದಾಗಿದೆ.
- **ಸ್ವತಂತ್ರ ಹಾಗೂ ಸಂಚಾರಿ ಮಾಧ್ಯಮ:** ರೇಡಿಯೋವನ್ನು ನಾವು ಎಲ್ಲಿಗೆ ಬೇಕಾದರೂ ಕೊಂಡೊಯ್ಯಬಹುದು ಹಾಗಾಗಿ ಇದು ಸಂಚಾರಿ ಮಾಧ್ಯಮವಾಗಿದೆ. ರೇಡಿಯೋ ಕೇಳುಗರು ರೇಡಿಯೋ ಕೇಳುತ್ತಲೇ ತಮ್ಮ ತಮ್ಮ ಕೆಲಸಗಳನ್ನು ಮಾಡಬಹುದಾಗಿರುವುದರಿಂದ ಇದನ್ನು ಸ್ವತಂತ್ರ ಮಾಧ್ಯಮ ಎಂದು ಕೂಡ ಕರೆಯುತ್ತಾರೆ. ಬೇರೆ ಮಾಧ್ಯಮಗಳಂತೆ ಪ್ರತ್ಯೇಕ ಸಮಯ ಮೀಸಲಿಡುವ ಅಗತ್ಯವಿಲ್ಲ.
- **ಆಯ್ಕೆಯ ಅವಕಾಶ:** ರೇಡಿಯೋ ಶ್ರೋತೃಗಳಿಗೆ ತಮ್ಮಿಷ್ಟದ ಕಂಪನಾಂಕವನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಒದಗಿಸಿದೆ. ಟಿವಿ ಮಾಧ್ಯಮದಂತೆ ಶ್ರೋತೃಗಳು ತಮಗೆ ಬೇಕಾದ ರೇಡಿಯೋ ಕಂಪನಾಂಕ ಆಯ್ಕೆ ಮಾಡಿಕೊಂಡು ತಮ್ಮಿಷ್ಟದ ಕಾರ್ಯಕ್ರಮಗಳನ್ನು ಕೇಳಬಹುದು. ಹಲವು ಭಾಷೆಗಳ, ಹಲವಾರು ಕಾರ್ಯಕ್ರಮಗಳು ಲಭ್ಯವಿದೆ. ಅಂತರ್ಜಾಲ ರೇಡಿಯೋ ಮೂಲಕ ವಿಶ್ವದಾದ್ಯಂತ ಇರುವ ರೇಡಿಯೋಗಳನ್ನು ಕೂಡ ಕೇಳಬಹುದಾಗಿದೆ.

**ಸಮುದಾಯ ರೇಡಿಯೋ ಬೆಳವಣಿಗೆ**

ಭಾರತಕ್ಕೆ ರೇಡಿಯೋ 1920 ರಲ್ಲಿ ಕಾಲಿಟ್ಟಿತು. 1937ರಲ್ಲಿ ಶಾಲಾ ಪ್ರಸಾರ ಯೋಜನೆಗಳು ದೆಹಲಿ, ಕೊಲ್ಕತ್ತಾ, ಮದ್ರಾಸ್ ಮತ್ತು ಬೊಂಬಾಯಿ ನಗರಗಳಲ್ಲಿ ಆರಂಭವಾಯಿತು. ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗಾಗಿ ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ವ್ಯಕ್ತಿತ್ವ ವಿಕಸನದ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಯಿತು. 1956 ರಲ್ಲಿ ಆಕಾಶವಾಣಿ ವಯಸ್ಕರ ಶಿಕ್ಷಣ ಮತ್ತು ಸಮುದಾಯದ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಹಾರಾಷ್ಟ್ರದ ಪೂನಾ ನಗರದ ಸುತ್ತಮುತ್ತ ಇರುವ ಸುಮಾರು 144 ಹಳ್ಳಿಗಳಲ್ಲಿ ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಯಿತು. ಆಕಾಶವಾಣಿಯ ಕೃಷಿ ಕಾರ್ಯಕ್ರಮಗಳು ಹೆಚ್ಚಿನ ಪ್ರಮಾಣದಲ್ಲಿ ಕೃಷಿಕರನ್ನು ಅಭಿವೃದ್ಧಿ ಯೋಜನೆಗಳತ್ತ ಆಕರ್ಷಿಸಿದವು. ಗ್ರಾಮೀಣ ಕೃಷಿಕರು ಮತ್ತು ಮಹಿಳೆಯರಿಗಾಗಿ ಕೃಷಿ ಮತ್ತು ಸಮುದಾಯದ ಅಭಿವೃದ್ಧಿ ಕೇಂದ್ರಿತ ಕಾರ್ಯಕ್ರಮಗಳನ್ನು ರೇಡಿಯೋ ವೇದಿಕೆಯಡಿ ಪ್ರಸಾರ ಮಾಡಲಾಯಿತು.

ಬಾನುಲಿ ಗ್ರಾಮೀಣ ವೇದಿಕೆಗಳನ್ನು 1959ರಲ್ಲಿ ಪುಣೆ ನಗರದಲ್ಲಿ ಯುನೆಸ್ಕೊ ಸಹಯೋಗದೊಂದಿಗೆ ಆರಂಭಿಸಲಾಯಿತು. 1965ರಲ್ಲಿ ಸುಮಾರು 12 ಸಾವಿರ ಬಾನುಲಿ ಗ್ರಾಮೀಣ ವೇದಿಕೆಗಳನ್ನು ಆರಂಭಿಸಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಪ್ರಸಾರ ಮಾಡಲಾಯಿತು. 1966ರಲ್ಲಿ ಕೃಷಿ ಮತ್ತು ಗೃಹಪ್ರಸಾರ ಯೋಜನೆಯನ್ನು ಆರಂಭಿಸಿ ಕೃಷಿಕರಿಗೆ ಮತ್ತು ಗ್ರಾಮೀಣ ಜನತೆಗೆ ಕೃಷಿ ಮತ್ತು ಇತರ ಪ್ರಮುಖ ಕ್ಷೇತ್ರಗಳಲ್ಲಿ ಜರುಗಿದ ಬೆಳವಣಿಗೆಗಳನ್ನು ಪರಿಚಯಿಸಲಾಯಿತು. 1979–80ರಲ್ಲಿ ಆಕಾಶವಾಣಿ ಶಿಕ್ಷಣ ಇಲಾಖೆ ಮತ್ತು ರಾಜಸ್ತಾನ ಸರ್ಕಾರಗಳ ಸಂಯುಕ್ತಾಶ್ರಯದಲ್ಲಿ ಭಾಷಾ ಕಲಿಕೆ ಕಾರ್ಯಕ್ರಮವನ್ನು ಆರಂಭಿಸಿತು.

1995ರಲ್ಲಿ ಸರ್ವೋಚ್ಚ ನ್ಯಾಯಾಲಯದ 'ಕಂಪನಾಂಕಗಳು ಅಥವಾ ಗಾಳಿಯಲ್ಲಿನ ತರಂಗಗಳು ಸಾರ್ವಜನಿಕ ಆಸ್ತಿ ' ಎಂಬ ತೀರ್ಪಿನ ನಂತರ ಸಮುದಾಯ ಬಾನುಲಿಗಳು ಸಂಖ್ಯೆ ಹೆಚ್ಚಿತು. ಗ್ರಾಮೀಣ ಪ್ರದೇಶದ ಹಿಂದುಳಿದ ಸಮುದಾಯಗಳಿಗೆ ಬಾನುಲಿ ಸೇವೆಯನ್ನು ವಿಸ್ತರಿಸಲಾಯಿತು. 1998ರಲ್ಲಿ ಮುಕ್ತ ವಿಶ್ವವಿದ್ಯಾಲಯಗಳ ಸಹಭಾಗಿತ್ವದೊಂದಿಗೆ ಬಾನುಲಿ ಸಲಹಾ ಸೇವೆಯನ್ನು ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪ್ರಸಾರ ಮಾಡಲಾಯಿತು. ಕೃಷಿ ವಿಶ್ವವಿದ್ಯಾಲಯ, ಅಭಿವೃದ್ಧಿ ಇಲಾಖೆಗಳು, ಸ್ವಯಂ ಸೇವಾ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಸೇರಿದಂತೆ ಮೊದಲಾದ ಸಂಸ್ಥೆಗಳು ಸಕ್ರಿಯವಾಗಿ ಈ ಕಾರ್ಯಕ್ರಮದಲ್ಲಿ ತೊಡಗಿಕೊಂಡವು. ಸರ್ಕಾರದ ವಿವಿಧ ಇಲಾಖೆಗಳು ಮತ್ತು ಅಭಿವೃದ್ಧಿ ಸಂಸ್ಥೆಗಳು ಜೊತೆಗೂಡಿ ಗ್ರಾಮೀಣ ಜನರಿಗೆ ಸ್ಥಳೀಯವಾಗಿ ಪ್ರಸ್ತುತವಾದ ಕಾರ್ಯಕ್ರಮಗಳನ್ನು ನಿರಂತರವಾಗಿ ಪ್ರಸಾರ ಮಾಡಲು ಬಾನುಲಿ ಸೇವೆ ಸಹಕಾರಿಯಾಯಿತು.

**ಸಮುದಾಯ ಬಾನುಲಿ**

ಒಂದು ಗ್ರಾಮ, ಗ್ರಾಮಗಳ ಸಮೂಹ, ಬಡಾವಣೆ ಅಥವಾ ಪಟ್ಟಣ ಮುಂತಾದ ನಿರ್ದಿಷ್ಟ ಭೌಗೋಳಿಕ ಪ್ರದೇಶಕ್ಕೆ ಸಮುದಾಯ ಎಂದು ಕರೆಯಲಾಗುತ್ತದೆ. ಅಂತಹ ಸಮುದಾಯಗಳ ಜನರಿಗಾಗಿ ಪ್ರತ್ಯೇಕವಾಗಿ ಕಾರ್ಯನಿರ್ವಹಿಸುವ ರೇಡಿಯೋಗೆ ಸಮುದಾಯ ಬಾನುಲಿ ಎಂದು ಕರೆಯಲಾಗುತ್ತದೆ.

ಸಮುದಾಯ ಬಾನುಲಿಯು ಒಂದು ಸೀಮಿತ ಪ್ರದೇಶದಲ್ಲಿ ವಾಸಿಸದೇ ಇದ್ದರೂ ಸಮಾನ ಆಸಕ್ತಿ ಇರುವ ಜನರ ಸಮೂಹವನ್ನು ಒಳಗೊಂಡಿರುತ್ತದೆ. ಉದಾಹರಣೆಗೆ ಮಹಿಳೆಯರು, ರೈತರು, ವಿದ್ಯಾರ್ಥಿಗಳು, ಮೀನುಗಾರರು, ಹಾಲು ಉತ್ಪಾದಕರು, ಬುಡಕಟ್ಟು ಜನಾಂಗ ಇತ್ಯಾದಿ.

ಸಮುದಾಯ ಬಾನುಲಿಗಳು ಒಂದು ಸಮೂಹದ ಆಶೋತ್ತರ ಮತ್ತು ಅಭಿವೃದ್ಧಿಗೆ ಪೂರಕವಾಗಿರುತ್ತದೆ. ಸಮುದಾಯದ ಭಾಗವಹಿಸುವಿಕೆ, ಸಮುದಾಯದ ಏಳ್ಗೆ ಇದರ ಪ್ರಮುಖ ಉದ್ದೇಶವಾಗಿದೆ.

**ಸಮುದಾಯ ಬಾನುಲಿಗಳ ಕಾರ್ಯಕ್ರಮಗಳು**

ಸಮುದಾಯ ರೇಡಿಯೋಗಳು ಸಾಮಾನ್ಯ ಎಫ್‌ಎಂ ಗಳಂತೆ ಕಾರ್ಯನಿರ್ವಹಿಸುವುದಿಲ್ಲ ಅದಕ್ಕೆ ಆದ ಕೆಲವು ನಿಬಂಧನೆಗಳಿವೆ. ಇತರೆ ಮಾಧ್ಯಮಗಳಾದ ಪುಸ್ತಕ, ಪತ್ರಿಕೆ, ಚಲನಚಿತ್ರ, ಟಿವಿ ಹಾಗೂ ರೇಡಿಯೋಗಳಿಗೆ ಹೋಲಿಸಿದರೆ ಸಮುದಾಯ ಬಾನುಲಿ ವೈಶಿಷ್ಟ್ಯ ಮತ್ತು ಮಹತ್ವದ ಮೇಲೆ ಬೆಳಕನ್ನು ಚೆಲ್ಲಲು ಸೀಮಿತ ಚೌಕಟ್ಟಿನಲ್ಲಿ ವಿಮರ್ಶಿಸಲಾಗುತ್ತಿದೆ. ಸಮುದಾಯ ರೇಡಿಯೋಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಮಹತ್ವದ ಕೆಲಸ ಮಾಡುತ್ತವೆ. ಸಮುದಾಯ ರೇಡಿಯೋದಲ್ಲಿ ಪ್ರಸಾರವಾಗುವ ಕಾರ್ಯಕ್ರಮ ಇದೇ ಮಾದರಿಯಲ್ಲಿ ಇರಬೇಕು ಎಂಬ ನಿಯಮಗಳನ್ನು ಸಮುದಾಯ ಬಾನುಲಿಗಳು ಅನುಸರಿಸಬೇಕಾಗುತ್ತದೆ.

ಸಮುದಾಯ ರೇಡಿಯೋ ಗಾತ್ರ, ವ್ಯಾಪ್ತಿ, ವ್ಯವಸ್ಥೆ, ಕಾರ್ಯಕ್ರಮಗಳು ಎಲ್ಲವೂ ಕೂಡ ಸರಳವಾಗಿರುತ್ತದೆ. ಕಾರ್ಯಕ್ರಮಗಳನ್ನು ಸಮುದಾಯದ ಪ್ರತಿನಿಧಿಳ ಸಹಭಾಗಿತ್ವದಲ್ಲಿ ಪ್ರಸಾರ ಕಾರ್ಯಕ್ರಮ ನಿರ್ಮಾಣ ಮಾಡಿಕೊಂಡು ಹೋಗಬೇಕಾಗುತ್ತದೆ. ನಿಲಯದ ಪ್ರಸಾರ ನೀತಿಯನ್ನು ರೂಪಿಸುವವರು, ಕಾರ್ಯಕ್ರಮ ಆಯೋಜನೆ ಮಾಡಿ ಭಾಗವಹಿಸಿ, ಪ್ರಸಾರಗೊಳ್ಳುವ ಕಾರ್ಯಕ್ರಮವನ್ನು ತಪ್ಪದೇ ಕೇಳುವವರು. ಇದರಿಂದಾಗಿ ಸಮುದಾಯ ರೇಡಿಯೋ ಉದ್ದೇಶ ಆಯಾ ಸಮುದಾಯಕ್ಕೆ ಸಶಕ್ತಿಕರಣದ ಸಾಧನವಾಗಿದೆ.

**ಸಮುದಾಯ ರೇಡಿಯೋ ಕಾರ್ಯಕ್ರಮ ಪ್ರಸಾರವಾಗುವ ಪ್ರಮುಖ ಅಂಶಗಳು**

1. ಒಂದು ನಿರ್ದಿಷ್ಟವಾಗಿ ಗುರುತಿಸಲ್ಪಟ್ಟ ಸಮೂಹಕ್ಕೆ ಒಳಪಟ್ಟಿರುತ್ತದೆ.
2. ಎಲ್ಲ ಆಗುಹೋಗುಗಳಲ್ಲಿ ಸಹಭಾಗಿತ್ವದ ತತ್ವವನ್ನು ಅಳವಡಿಸಿಕೊಳ್ಳಲಾಗಿರುತ್ತದೆ.
3. ಸಮುದಾಯದ ಯಾವುದೇ ಸದಸ್ಯರು ಬೇಕಾದರೂ ಕಾರ್ಯಕ್ರಮ ಯೋಜಿಸುವ, ನಿರ್ಮಿಸುವ, ಭಾಗವಹಿಸುವ ಮತ್ತು ನಿಲಯವನ್ನು ನಿರ್ವಹಿಸುವ ಅವಕಾಶವನ್ನು ನೀಡುತ್ತದೆ.
4. ಕಾರ್ಯಕ್ರಮ ನಿರೂಪಿಸುವಲ್ಲಿ ವಸ್ತುವಿಷಯಗಳಲ್ಲಿ ಸಮುದಾಯ ಸಮಸ್ಯೆಗಳು, ಆಸೆ ಆಕಾಂಕ್ಷೆಗಳು, ಸಾಂಸ್ಕೃತಿಕ ಅಪೇಕ್ಷೆಗಳಿಗೆ ರೇಡಿಯೋ ಕಾರ್ಯಕ್ರಮ ತಯಾರು ಮಾಡಿ ಪ್ರಸಾರಕ್ಕೆ ಅವಕಾಶ ಕಲ್ಪಿಸುತ್ತದೆ.
5. ಕಾರ್ಯಕ್ರಮದಲ್ಲಿ ಅಲ್ಲಿನ ಪ್ರದೇಶದ ಸಮುದಾಯವು ಭಾಗವಹಿಸುವಂತೆ ಉತ್ತೇಜಿಸುವುದು.
6. ಆ ವ್ಯಾಪ್ತಿಯನ್ನು ಬಿಟ್ಟು ಇತರರು ಆ ಸಮುದಾಯದ ಹಿತದೃಷ್ಟಿಯನ್ನು ಕಾಪಾಡುವುದು.
7. ಸಮುದಾಯದ ಅನುಕೂಲ ಮತ್ತು ಆಶೋತ್ತರಗಳಿಗೆ ತಕ್ಕಂತೆ ಕಾರ್ಯಕ್ರಮ ನೀತಿ, ನಿಯಮ, ಪ್ರಸಾರ ವೇಳೆ ಇತ್ಯಾದಿಗಳನ್ನು ರೂಪಿಸಿಕೊಳ್ಳುವುದು.
8. ಆದಾಯದ (ವಾಣಿಜ್ಯ) ಉದ್ದೇಶಕ್ಕಿಂತ ಸಮುದಾಯಕ್ಕೆ ಸಂವಹನದ ಮೂಲಕ ಅಗತ್ಯವನ್ನು ಪೂರೈಸಿಕೊಡುವುದು.
9. ರಂಜನೆ ನೀಡುವಂತಹ ಕಾರ್ಯಕ್ರಮ ನೀಡುವುದಕ್ಕಿಂತ ಮಾಹಿತಿ ಮಾರ್ಗದರ್ಶನ, ಶಿಕ್ಷಣ, ಜಾಗೃತಿ, ಸಶಕ್ತಿಗೊಳಿಸುವ ಕಾರ್ಯಕ್ರಮ ಪ್ರಸಾರ ಮಾಡುವುದು.
10. ರೇಡಿಯೋ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಮುದಾಯ ವಿವಿಧ ವರ್ಗ, ಲಿಂಗ, ವಯೋಮಾನ ಇತ್ಯಾದಿಗಳಿಗೆ ತಾರತಮ್ಯ ನೀಡದೆ ಎಲ್ಲರಿಗೂ ಸಮಾನ ಅವಕಾಶ ನೀಡುವುದು.

**ಸಮುದಾಯ ರೇಡಿಯೋ ಕಾರ್ಯನೀತಿ ಸ್ವರೂಪ**

ಕೇಂದ್ರ ಸರ್ಕಾರವು ಘೋಷಿಸಿರುವ ಸಮುದಾಯ ರೇಡಿಯೋ ಕಾರ್ಯನೀತಿಯ ಪ್ರಕಾರ ಸಮುದಾಯ ರೇಡಿಯೋ ಕೆಲವು ಮಾನದಂಡವನ್ನು ಅನುಸರಿಸಬೇಕಾಗುತ್ತದೆ.

1. ಸಮುದಾಯ ಆಧಾರಿತ ಮತ್ತು ಸರ್ಕಾರೇತರ ಸಂಸ್ಥೆಗಳು, ಐಸಿಅರ್‌ನ ಕೃಷಿವಿಜ್ಞಾನ ಕೇಂದ್ರಗಳ ಸೊಸೈಟಿ ಅಧಿನಿಯಮದ ಅಡಿಯಲ್ಲಿ ನೋಂದಾಯಿತ ಸೊಸೈಟಿಗಳು ಮತ್ತು ಸ್ವಾಯತ್ತ ಸಂಸ್ಥೆಗಳು ಮತ್ತು ಸಾರ್ವಜನಿಕ ಟ್ರಸ್ಟ್‌ಗಳು, ಲಾಭಗಳಿಸುವ ಉದ್ದೇಶವಿಲ್ಲದ ಸಂಸ್ಥೆಗಳು ರೇಡಿಯೋ ಲೈಸೆನ್ಸ್ ಪಡೆದುಕೊಳ್ಳಬಹುದಾಗಿದೆ.
2. ನೋಂದಾಯಿತ ಸಂಸ್ಥೆಯ ಸ್ಥಳೀಯ ಸಮುದಾಯಕ್ಕೆ ಕನಿಷ್ಠ ಮೂರು ವರ್ಷಗಳ ಸಾರ್ಥಕ ಸೇವೆ ಸಲ್ಲಿಸಿರಬೇಕಾಗುತ್ತದೆ.
3. ಸಮುದಾಯ ರೇಡಿಯೋ ನಿರ್ದಿಷ್ಟವಾದ ಸ್ಥಳೀಯ ಸಮುದಾಯಕ್ಕೆ ಸೇವೆ ಒದಗಿಸಬೇಕು.
4. ಸಮುದಾಯ ರೇಡಿಯೋ ನಿರ್ವಹಣೆ ಮತ್ತು ಮಾಲೀಕತ್ವದ ಸ್ವರೂಪ ತನ್ನಲ್ಲಿರುವ ಸಮುದಾಯವನ್ನು ಪ್ರತಿನಿಧಿಸಬೇಕು.
5. ಸಮುದಾಯ ರೇಡಿಯೋ ಕೇಂದ್ರದಿಂದ ಪ್ರಸಾರವಾಗುವ ಕಾರ್ಯಕ್ರಮಗಳು ಸಮುದಾಯದ ಶಿಕ್ಷಣ ಅಭಿವೃದ್ಧಿ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸುವ ಉದ್ದೇಶವನ್ನು ಹೊಂದಿರಬೇಕು.

6. ರಾಜಕೀಯ ಸ್ವಭಾವವಿರುವ ವಾರ್ತಾ ಪ್ರಸಾರವನ್ನು ಸಮುದಾಯ ರೇಡಿಯೋ ಕೇಂದ್ರಗಳು ಪ್ರಸಾರ ಮಾಡುವಂತಿಲ್ಲ.
7. ಮುಖ್ಯವಾಗಿ ಪ್ರತಿ ಒಂದು ಗಂಟೆಯ ಕಾರ್ಯಕ್ರಮದಲ್ಲಿ ಐದು ನಿಮಿಷ ಅವಧಿಗಾಗಿ, ಸ್ಥಳೀಯ ಕಾರ್ಯಕ್ರಮಗಳು, ವಾಣಿಜ್ಯ ವ್ಯಾಪಾರ, ಸೇವೆಗಳ ಕುರಿತು ಜಾಹೀರಾತು ಪ್ರಸಾರ ಮಾಡಲು ಅವಕಾಶವಿದೆ.
8. ಕನಿಷ್ಠ ಶೇ.50 ರಷ್ಟು ಕಾರ್ಯಕ್ರಮಗಳು ಸಮುದಾಯದ ಭಾಗವಹಿಸುವಿಕೆಯೊಂದಿಗೆ ಇದ್ದು, ಸ್ಥಳೀಯ ಭಾಷೆ ಮತ್ತು ಉಪಭಾಷೆಗಳೊಂದಿಗೆ ಇರಬೇಕು.

**ಸಮುದಾಯ ರೇಡಿಯೋ ಕಾರ್ಯಕ್ರಮದ ಪ್ರಯೋಜನಗಳು**

1. ಸಮುದಾಯದ ಜನರಿಗೆ ಸೂಕ್ತ ಮಾಹಿತಿಗಳು ದೊರೆಯುತ್ತವೆ.
2. ಸಮುದಾಯದಲ್ಲಿನ ಪ್ರತಿಭೆಗಳ ಅನಾವರಣವಗೊಳ್ಳುತ್ತದೆ.
3. ಸಮುದಾಯದ ಜನರು ಸಕ್ರಿಯವಾಗಿ ರೇಡಿಯೋ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ.
4. ಬಾನುಲಿ ಮೂಲಕ ಹಂಚುವ ಮಾಹಿತಿ ಸಮುದಾಯದವರಲ್ಲಿ ಚರ್ಚಿಸಲ್ಪಡುತ್ತದೆ.
5. ಸಮುದಾಯದ ಅಭಿವೃದ್ಧಿಗಾಗಿ ಹೊಸ ಹೊಸ ಯೋಜನೆಗಳಿಗೆ ಪ್ರೋತ್ಸಾಹ ದೊರೆಯುತ್ತದೆ.
6. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸೂಕ್ತ ವೇದಿಕೆ
7. ಸಮುದಾಯದ ಧ್ವನಿಯಾಗಿ ಬಾನುಲಿಗಳು ಕಾರ್ಯನಿರ್ವಹಿಸುತ್ತವೆ.
8. ಜನರಿಗೆ ತಮ್ಮದೇ ಆದ ಭಾಷೆಯಲ್ಲಿ ಮಾಹಿತಿ ಸಿಗುವುದು.
9. ಸಮುದಾಯದ ಸಮಸ್ಯೆಗಳಿಗೆ ಪರಿಹಾರ ಸಿಗುವುದು.

**ಉಪಸಂಹಾರ**

ಒಂದು ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಅಗತ್ಯವಾದ ವಿಷಯಗಳನ್ನು ಕಾರ್ಯಕ್ರಮಗಳನ್ನಾಗಿ ಪರಿವರ್ತಿಸುವಲ್ಲಿ ಸಮುದಾಯ ಬಾನುಲಿಗಳು ಯಶಸ್ವಿಯಾಗಿವೆ. ಸಮುದಾಯದ ವಿವಿಧ ವಯೋಮಾನದ, ಉದ್ಯೋಗದ, ಧರ್ಮದ, ಸಂಸ್ಕೃತಿಯ ಜನರನ್ನು ಗಮನದಲ್ಲಿಟ್ಟುಕೊಂಡು ರೂಪಿಸುವ ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ಕಂಡುಬರುತ್ತಿದೆ. ಸಂಪನ್ಮೂಲ ವ್ಯಕ್ತಿಗಳು ಮತ್ತು ಸ್ಥಳೀಯ ಮುಖಂಡರುಗಳು, ಕ್ಷೇತ್ರದ ಅಧಿಕಾರಿಗಳಿಂದ ಕಾರ್ಯಕ್ರಮಗಳನ್ನು ನೀಡುತ್ತಿರುವುದರಿಂದ ಉತ್ತಮ ಮಾಹಿತಿ ಜನರನ್ನು ತಲುಪುತ್ತಿದೆ. ಸಮುದಾಯದ ಜನರು ಕೂಡ ರೇಡಿಯೋ ಕಾಯ್ರಕ್ರಮಗಳಲ್ಲಿ ಭಾಗವಹಿಸುತ್ತಿರುವುದು ಕಾರ್ಯಕ್ರಮದ ಪರಿಣಾಮ ಮತ್ತು ಯಶಸ್ಸನ್ನು ಬಿಂಬಿಸುತ್ತಿವೆ. ಸಮುದಾಯದ ಕಾರ್ಯಕ್ರಮಗಳಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳಿಂದ ಮತ್ತು ಸಮುದಾಯದ ಜನರನ್ನೇ ಬಳಸಿಕೊಂಡು ಹೆಚ್ಚು ಕಾರ್ಯಕ್ರಮಗಳನ್ನು ರೂಪಿಸುತ್ತಿರುವುದರಿಂದ ಸಮುದಾಯದ ಪ್ರತಿಭೆಗಳಿಗೆ ಉತ್ತಮ ಅವಕಾಶ ಸಿಕ್ಕಿವೆ. ಒಂದು ಆರೋಗ್ಯಕರವಾದ ಸಮುದಾಯದ ನಿರ್ಮಾಣದಲ್ಲಿ ಸಮುದಾಯ ಬಾನುಲಿಗಳು ಕಾರ್ಯೋನ್ಮುಕವಾಗಿವೆ.

**ಪರಾಮರ್ಶನ ಗ್ರಂಥಗಳು**


1. ಖಾನ್ ಎ ಡಬ್ಲ್ಯು (1987) ದ ರೋಲ್ ಆಫ್ ರೇಡಿಯೋ ಇನ್ ಡೆವಲಪ್‌ಮೆಂಟ್ ಕಮ್ಯುನಿಕೇಷನ್: ಎ ಕಂಟ್ರಿ ಕಸಿನ್ ಸಿಂಡ್ರೋಮ್, ಇನ್ ಕೆ.ಇ.ಈಪನ್ (ಸಂ), ದ ರೋಲ್ ಆಫ್ ರೇಡಿಯೋ ಇನ್ ಗ್ರೋತ್ ಅಂಡ್ ಡೆವಲಪ್‌ಮೆಂಟ್, ಬೆಂಗಳೂರು ಯೂನಿವರ್ಸಿಟಿ, ಬೆಂಗಳೂರು, ಇಂಡಿಯಾ.
2. ಡಾ.ನಾಗೇಂದ್ರ (2011) 'ರೇಡಿಯೋಧ್ವನಿ'
3. ಡಾ.ಬಿ.ಪಿ ಮಹೇಶಚಂದ್ರ ಗುರು (2014) 'ಅಭಿವೃದ್ಧಿ ಸಂವಹನ ಮತ್ತು ಪತ್ರಿಕೋದ್ಯಮ'
4. ಯುನೆಸ್ಕೊ (1961) ಮಾಸ್ ಮೀಡಿಯಾ ಇನ್ ದ ಡೆವೆಲಪಿಂಗ್ ಕಂಟ್ರೀಸ್, ಎ ರಿಪೋರ್ಟ್ ಸಬ್‌ಮಿಟೆಡ್ ಟು ದ ಯುನೈಟೆಡ್ ನೇಶನ್ಸ್ ಆರ್ಗನೈಸೇಶನ್ಸ್, ಪ್ಯಾರೀಸ್.
5. ರಾಮಿರೆಜ್, ಆರ್ (1998) ಕಮ್ಯುನಿಕೇಶನ್: ಎ ಮೀಟಿಂಗ್ ಗ್ರೌಂಡ್ ಫಾರ್ ಸಸ್ಟೈನೆಬಲ್ ಡೆವಲಪ್‌ಮೆಂಟ್, ರಿಚರ್ಡ್‌ಸನ್, ಡಿ ಮತ್ತು ಪೈಸ್ಲೆ, ಎಲ್ (ಸಂ) ದ ಫಸ್ಟ್ ಮೈಲ್ ಆಫ್ ಕನೆಕ್ಟಿವಿಟಿ, ಅಡ್ವಾನ್ಸಿಂಗ್ ಟೆಲಿಕಮ್ಯುನಿಕೇಷನ್ ಫಾರ್ ರೂರಲ್ ಡೆವೆಲಪ್‌ಮೆಂಟ್ ಥ್ರೂ ಎ ಪಾರ್ಟಿಸಿಪೇಟರಿ ಕಮ್ಯುನಿಕೇಶನ್ ಅಪ್ರೋಚ್, ರೋಮ್: ಎಫ್.ಎ.ಒ